ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ. ಸಿ.3(7) ಪ್ರಾ.ಶಿಪ್ರೌ.ಶಿ.ವರ್ಗ:01: 2009-10. ದಿನಾಂಕ: 07-04-2010

## ಅಧಿಕೃತ ಜ್ಞಾಪನ

ವಿಷಯ: 2010-11ನೇ ಸಾಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆಗಳನ್ನು ಕಂಪ್ಯೂಟರ್ ವ್ಯವಸ್ಥೆ ಮೂಲಕ ಮಾಡುವ ಬಗ್ಗೆ ಮಾರ್ಗಸೂಚಿ.

ಉಲ್ಲೇಖ: 1.ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 1 ಶಾಸನ 2007 ದಿ:01.09.2007
2.ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007 ದಿ:15.10.2007
3.ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 173 ಇಟಿಆರ್ 2007 ದಿ:14.11.2007
4.ಸರ್ಕಾರದ ಪತ್ರಸಂಖ್ಯೆ: ಇಡಿ. 37 ಇಟಿಆರ್.2009 (ಪಿ) ದಿ:11.03.2010

---

1. ಉಲ್ಲೇಖ-1ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ಜಾರಿಗೆ ಬಂದಿರುತ್ತದೆ. ಇದರ ಅನ್ವಯ ಉಲ್ಲೇಖ-2ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007ನ್ನು ರೂಪಿಸಲಾಗಿದೆ. ಉಲ್ಲೇಖ-3ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ.173.ಇಟಿಆರ್.2007 ದಿನಾಂಕ: 14.11.2007ರಲ್ಲಿ ಎ, ಬಿ, ಸಿ, ವಲಯದ ವರ್ಗೀಕರಣದ ಪ್ರದೇಶ ಹಾಗೂ ವ್ಯಾಪ್ತಿಯನ್ನು ಅಧಿಸೂಚಿಸಲಾಗಿದೆ.

2. ಮೇಲಿನ ಆದೇಶಗಳಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆಗಳನ್ನು 2010 ರ ಏಪ್ರಿಲ್ / ಮೇ ಮಾಹೆಯಲ್ಲಿ ನಡೆಸಬೇಕಾಗಿರುತ್ತದೆ. ವರ್ಗಾವಣೆ ಬಯಸುವವರು ಅರ್ಜಿಗಳನ್ನು ಇಂಟರ್‌ನೆಟ್ ಮೂಲಕ ಮಾತ್ರ ಸಲ್ಲಿಸಬೇಕಾಗಿರುತ್ತದೆ. ಖುದ್ದಾಗಿ ಅಥವಾ ಟಪಾಲು ಮೂಲಕ ಲಿಖಿತವಾಗಿ ಸಲ್ಲಿಸಿದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಪರಿಗಣಿಸಲಾಗುವುದಿಲ್ಲ. ಗಣಕೀಕರಿಸಿದ ಅರ್ಜಿಗಳ ಮಾಹಿತಿಯನ್ನು ಗಣಕೀಕರಿಸಿದ ದಿನಾಂಕದಿಂದ 22.04.2010 ರೊಳಗಾಗಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಖುದ್ದಾಗಿ ಹಾಜರಾಗಿ, ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿಗೆ ಸಂಬಂಧಿಸಿದ ದಾಖಲೆಗಳನ್ನು ನೀಡಿ ಸ್ವೀಕೃತಿ ಪಡೆಯುವುದು ಕಡ್ಡಾಯ. ಖುದ್ದಾಗಿ ಹಾಜರಾಗಿ ಸ್ವೀಕೃತಿ ಪಡೆಯದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

3. 2010 ನೇ ಏಪ್ರಿಲ್ / ಮೇ ಮಾಹೆಯಲ್ಲಿ ನಡೆಯುವ ಸಾಮಾನ್ಯ ವರ್ಗಾವಣೆಗೆ ಸರ್ಕಾರಿ ಪ್ರಾಥಮಿಕ / ಪ್ರೌಢ ಶಾಲಾ ಶಿಕ್ಷಕರು ಅಂತರ್‌ಜಾಲದ (ಇಂಟರ್ ನೆಟ್) ಮೂಲಕ ಅರ್ಜಿಗಳನ್ನು ಸಲ್ಲಿಸುವ ಬಗ್ಗೆ ವೇಳಾಪಟ್ಟಿಯನ್ನು ಕೆಳಗಿನಂತೆ ನಿಗದಿಪಡಿಸಿದೆ :-

| ಕ್ರ.ಸಂ. | ವಿವರ | ದಿನಾಂಕ | ನಿರ್ವಹಣಾ ಅಧಿಕಾರಿ |
|---|---|---|---|
| 01 | ಎ, ಬಿ, ಸಿ, ವಲಯಗಳಂತೆ ಶಾಲೆಗಳ ಪಟ್ಟಿಯನ್ನು ವೆಬ್ ಸೈಟ್‌ನಲ್ಲಿ ಪ್ರಕಟಿಸುವ ದಿನಾಂಕ | 07.04.2010 | ಜಿಲ್ಲಾ ಉಪನಿರ್ದೇಶಕರು (ಆಡಳಿತ)<br>ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ, ಬೆಂಗಳೂರು |
| 02 | ವರ್ಗಾವಣಾ ಅರ್ಜಿ ನಮೂನೆಗಳನ್ನು ವೆಬ್ ಸೈಟ್‌ಗೆ ಫೀಡ್ ಮಾಡುವುದು ಹಾಗೂ ವರ್ಗಾವಣೆ ಬಯಸುವ ಶಿಕ್ಷಕರಿಂದ ಅರ್ಜಿಗಳನ್ನು ಆಹ್ವಾನಿಸಲು ಪ್ರಕಟಣೆ | 12.04.2010 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು<br>ಅಪರ ಆಯುಕ್ತರು, ಧಾರವಾಡ, ಗುಲ್ಬರ್ಗಾ. |
| 03 | ವಿಭಾಗವಾರು ವರ್ಗಾವಣಾ ಪ್ರಾಧಿಕಾರಿಗಳಿಗೆ ತರಬೇತಿ<br>(ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರ | 15.04.2010<br>ಬೆಂಗಳೂರು, ಮೈಸೂರು | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು - ಶಿಕ್ಷಕರ ಸದನ. |

| | | | |
|---|---|---|---|
| | ಕಛೇರಿಯ ನೋಡಲ್ ಅಧಿಕಾರಿಗಳು ಹಾಗು ಕಂಪ್ಯೂಟರ್ ಪ್ರೋಗ್ರಾಮರ್) | ವಿಭಾಗ 16.04,2010 ಧಾರವಾಡ, ಗುಲ್ಬರ್ಗ ವಿಭಾಗ | |
| 04 | ಹೆಚ್ಚುವರಿ ಹುದ್ದೆ ಹಾಗೂ ಶಿಕ್ಷಕರ ಸ್ಥಳಾಂತರ | 17.04.2010 ರೊಳಗಾಗಿ ಪೂರ್ಣ ಗೊಳಿಸುವುದು | ಉಪನಿರ್ದೇಶಕರು (ಆಡಳಿತ) |
| 05 | ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ವೃಂದವಾರು ಎಲ್ಲಾ ಖಾಲಿ ಹುದ್ದೆಗಳ ಪ್ರಕಟಣೆ (ನೇಮಕಾತಿಗೆ ಅಧಿಸೂಚಿಸಿದ ಹುದ್ದೆಗಳು ಸೇರಿದಂತೆ) | 21.04.2010 | ಉಪ ನಿರ್ದೇಶಕರು (ಆಡಳಿತ) |
| 06 | ವರ್ಗಾವಣೆ ಅರ್ಜಿಯಲ್ಲಿ ವೈಯಕ್ತಿಕ ವಿವರಗಳನ್ನು ಸಂಬಂಧಿಸಿದ ಶಿಕ್ಷಕರು ಗಣಕೀಕರಿಸಲು ಕೊನೆಯ ದಿನಾಂಕ | 22.04.2010 | ಸಂಬಂಧಿಸಿದ ಶಿಕ್ಷಕರು ಪ್ರಕಟಣಾ ದಿನಾಂಕದಿಂದ 22.04.2010 ರೊಳಗೆ ಗಣಕೀಕರಿಸುವುದು. |
| 07 | ಗಣಕೀಕರಿಸಿದ ಅರ್ಜಿಗಳನ್ನು ಪರಿಶೀಲಿಸುವ ಕೊನೆಯ ದಿನಾಂಕ (ಗಣಕೀಕರಿಸಿದ ದಿನಾಂಕದಿಂದ) | 24.04.2010 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಂಬಂಧಿಸಿದ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರು |
| 08 | ಆದ್ಯತಾ ಪಟ್ಟಿಯಲ್ಲಿ ಜೇಷ್ಠತೆಯನ್ನು ಸಮರ್ಥಿಸುವ ದಾಖಲೆಗಳನ್ನು ಉಪ ನಿರ್ದೇಶಕರಿಗೆ ಸಲ್ಲಿಸುವ ದಿನಾಂಕ | 26.04.2010 | ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 09 | ಉಪ ನಿರ್ದೇಶಕರು ವೈದ್ಯಕೀಯ ಮಂಡಳಿಗೆ ಅಂಗವಿಕಲತೆ ಮತ್ತು ತೀವ್ರತರ ಅನಾರೋಗ್ಯದ ಪ್ರಕರಣಗಳ ನೈಜತೆ ಪರಿಶೀಲನೆಗೆ ಪ್ರಸ್ತಾವನೆ ಕಳುಹಿಸುವ ದಿನಾಂಕ | 28.04..2010 | ಉಪನಿರ್ದೇಶಕರು (ಆಡಳಿತ) |
| 10 | ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ನೈಜ್ಯತೆಯ ಬಗ್ಗೆ ದೃಢೀಕರಿಸಿದ ಪತ್ರಗಳನ್ನು ಪಡೆಯಲು ಕೊನೆಯ ದಿನಾಂಕ | 05.05.2010 | ಉಪನಿರ್ದೇಶಕರು (ಆಡಳಿತ) |
| 11 | ಆದ್ಯತಾ ಪಟ್ಟಿಯಲ್ಲಿ ಜೇಷ್ಠತೆಯನ್ನು ಸಮರ್ಥಿಸುವ ದಾಖಲೆಗಳು ಹಾಗು ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಕ್ಕೆ ಕಳುಹಿಸುವ ದಿನಾಂಕ | 07.05.2010 | ಉಪನಿರ್ದೇಶಕರು (ಆಡಳಿತ) |
| 12 | ತಾತ್ಕಾಲಿಕ ಆದ್ಯತಾ ಪಟ್ಟಿ ಪ್ರಕಟಣೆ (ಎಲ್ಲಾ ಹಂತದಲ್ಲಿ ಏಕಕಾಲಕ್ಕೆ ) | 10.05.2010 | ಉಪ ನಿರ್ದೇಶಕರು, ಸಹ ನಿರ್ದೇಶಕರು ಮತ್ತು ರಾಜ್ಯ ಮಟ್ಟದ ವರ್ಗಾವಣಾ ಪ್ರಾಧಿಕಾರ |
| 13 | ಪರಸ್ಪರ ವರ್ಗಾವಣೆಗೆ ಕೌನ್ಸೆಲಿಂಗ್ ದಿನಾಂಕ ಏಕಕಾಲದಲ್ಲಿ | 12.05.2010 (ಪ್ರಾಥಮಿಕ ) 14.05,.2010 (ಪ್ರೌಢ ) | ಉಪ ನಿರ್ದೇಶಕರು ಮತ್ತು ಸಂಬಂಧಿಸಿದ ಎಲ್ಲಾ ಪ್ರಾಧಿಕಾರಿಗಳು, ಜಂಟಿ ನಿರ್ದೇಶಕರು ಮತ್ತು ಸಂಬಂಧಿಸಿದ ಎಲ್ಲಾ ಪ್ರಾಧಿಕಾರಿಗಳು |

| | | | |
|---|---|---|---|
| 14 | ತಾತ್ಕಾಲಿಕ ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳನ್ನು ಇಂಟರ್‌ನೆಟ್ ಮೂಲಕ ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 15.05.2010 | ಸಂಬಂಧಿಸಿದ ಶಿಕ್ಷಕರು |
| 15 | ಅಂತಿಮ ಆಧ್ಯತಾ ಪಟ್ಟಿ ಪ್ರಕಟಿಸುವ ದಿನಾಂಕ | 17.05.2010 | ಉಪನಿರ್ದೇಶಕರು (ಆಡಳಿತ)– ಜಿಲ್ಲಾ ಮಟ್ಟ<br>ಸಹ ನಿರ್ದೇಶಕರು – ವಿಭಾಗ ಮಟ್ಟದಲ್ಲಿ ಸಂಬಂಧಿಸಿದ ನಿರ್ದೇಶಕರು – ರಾಜ್ಯ ಮಟ್ಟದಲ್ಲಿ |
| 16 | ಪ್ರಾಥಮಿಕ ಶಾಲಾ ಸಹ ಶಿಕ್ಷಕರಿಗೆ ಕೌನ್ಸೆಲಿಂಗ್ (ಜಿಲ್ಲಾ ಮಟ್ಟದಲ್ಲಿ ) | 18.05.2010 | ಉಪ ನಿರ್ದೇಶಕರು (ಆಡಳಿತ)<br>ಮತ್ತು<br>ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 17 | ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು, ಪದವೀಧರೇತರ ಮುಖ್ಯ ಶಿಕ್ಷಕರು ಮತ್ತು ವಿಶೇಷ ಶಿಕ್ಷಕರಿಗೆ ಕೌನ್ಸೆಲಿಂಗ್ (ಜಿಲ್ಲಾ ಮಟ್ಟದಲ್ಲಿ ) | 19.05,2010 | ಉಪ ನಿರ್ದೇಶಕರು (ಆಡಳಿತ)<br>ಮತ್ತು<br>ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 18. | ಪ್ರೌಢ ಶಾಲಾ ಸಹ ಶಿಕ್ಷಕರಿಗೆ ಕೌನ್ಸೆಲಿಂಗ್ (ವಿಭಾಗ ಮಟ್ಟದಲ್ಲಿ ) | 20.05.2010 | ಸಂಬಂಧಿಸಿದ ಜಂಟಿ ನಿರ್ದೇಶಕರು ಮತ್ತು ಉಪ ನಿರ್ದೇಶಕರು (ಆಡಳಿತ) |
| 19 | ಪ್ರೌಢ ಶಾಲಾ ದೈಹಿಕ ಶಿಕ್ಷಕರಿಗೆ ಮತ್ತು ವಿಶೇಷ ಶಿಕ್ಷಕರಿಗೆ ಕೌನ್ಸೆಲಿಂಗ್ (ವಿಭಾಗ ಮಟ್ಟದಲ್ಲಿ ) | 21.05.2010 | ಸಂಬಂಧಿಸಿದ ಜಂಟಿ ನಿರ್ದೇಶಕರು ಮತ್ತು ಉಪ ನಿರ್ದೇಶಕರು (ಆಡಳಿತ) |
| 20 | ರಾಜ್ಯ ಮಟ್ಟದ ಕೌನ್ಸೆಲಿಂಗ್‌ಗಾಗಿ ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆ ಪ್ರಕಟಣೆ | 22.05.2010 | ಸಂಬಂಧಿಸಿದ<br>1) ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)<br>2) ನಿರ್ದೇಶಕರು (ಪ್ರೌಢ ಶಿಕ್ಷಣ)<br>3) ನಿರ್ದೇಶಕರು, ಧಾರವಾಡ ಆಯುಕ್ತಾಲಯ<br>4) ನಿರ್ದೇಶಕರು, ಗುಲ್ಬರ್ಗಾ ಆಯುಕ್ತಾಲಯ |
| 21 | ರಾಜ್ಯ ಮಟ್ಟದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಕೌನ್ಸೆಲಿಂಗ್ (ಸಂಬಂಧಿಸಿದ ವಿಭಾಗದ ನಿರ್ದೇಶಕರ ಹಂತದಲ್ಲಿ) | 24.05.2010 | ಸಂಬಂಧಿಸಿದ<br>1) ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)<br>2) ನಿರ್ದೇಶಕರು (ಪ್ರೌಢ ಶಿಕ್ಷಣ)<br>3) ನಿರ್ದೇಶಕರು, ಧಾರವಾಡ ಆಯುಕ್ತಾಲಯ<br>4) ನಿರ್ದೇಶಕರು, ಗುಲ್ಬರ್ಗಾ ಆಯುಕ್ತಾಲಯ |
| 22 | ರಾಜ್ಯ ಮಟ್ಟದ ಕೌನ್ಸೆಲಿಂಗ್‌ಗಾಗಿ ಪ್ರೌಢ ಶಾಲಾ ಶಿಕ್ಷಕರ ಖಾಲಿ ಹುದ್ದೆ ಪ್ರಕಟಣೆ | 26.05.2010 | ಸಂಬಂಧಿಸಿದ<br>1) ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)<br>2) ನಿರ್ದೇಶಕರು (ಪ್ರೌಢ ಶಿಕ್ಷಣ)<br>3) ನಿರ್ದೇಶಕರು, ಧಾರವಾಡ ಆಯುಕ್ತಾಲಯ<br>4) ನಿರ್ದೇಶಕರು, ಗುಲ್ಬರ್ಗಾ ಆಯುಕ್ತಾಲಯ |

| | | | |
|---|---|---|---|
| 23 | ರಾಜ್ಯ ಮಟ್ಟದ ಪ್ರೌಢ ಶಾಲಾ ಸಹ ಶಿಕ್ಷಕರ ಕೌನ್ಸೆಲಿಂಗ್ (ಸಂಬಂಧಿಸಿದ ವಿಭಾಗದ ನಿರ್ದೇಶಕರ ಹಂತದಲ್ಲಿ) | 28.05.2010 | ಸಂಬಂಧಿಸಿದ<br>1) ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)<br>2) ನಿರ್ದೇಶಕರು (ಪ್ರೌಢ ಶಿಕ್ಷಣ)<br>3) ನಿರ್ದೇಶಕರು, ಧಾರವಾಡ ಆಯುಕ್ತಾಲಯ<br>4) ನಿರ್ದೇಶಕರು, ಗುಲ್ಬರ್ಗಾ ಆಯುಕ್ತಾಲಯ |
| 24 | ಶಿಸ್ತಿನ ಪ್ರಕರಣಗಳ ವರ್ಗಾವಣೆ | 29.05.2010 | ಉಪನಿರ್ದೇಶಕರು (ಆಡಳಿತ) ಹಾಗೂ ಸಂಬಂಧಿಸಿದ ಶಿಸ್ತು ಪ್ರಾಧಿಕಾರ |

4. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 173 ಇಟಿಆರ್ 2007 ದಿನಾಂಕ: 15.10.2007 ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007ರ ನಿಯಮ 6 ರಂತೆ ಸರ್ಕಾರಿ ಪ್ರಾಥಮಿಕ / ಪ್ರೌಢ ಶಾಲಾ ಶಿಕ್ಷಕರು ಹಾಗೂ ತತ್ಸಮಾನ ವೃಂದಕ್ಕೆ ಸಂಬಂಧಪಟ್ಟ ವರ್ಗಾವಣೆಗೆ ಎರಡು ಅರ್ಜಿ ನಮೂನೆಗಳನ್ನು ಇಲಾಖೆಯ ವೆಬ್‌ಸೈಟ್ www,schooleducation.kar.nic.in ನಲ್ಲಿ ಪ್ರಕಟಿಸಲಾಗಿದೆ. (ಪರಸ್ಪರ ನಮೂನೆ – 1, ಕೋರಿಕೆ ನಮೂನೆ – 2)

5. ಸರ್ಕಾರಿ ಪ್ರಾಥಮಿಕ / ಪ್ರೌಢಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು ಕೋರಿಕೆ ಮೇಲೆ ವರ್ಗಾವಣೆಗೆ ಅರ್ಜಿ ಸಲ್ಲಿಸುವುದಾದಲ್ಲಿ ಇಲಾಖೆಯ ವೆಬ್‌ಸೈಟ್‌ನಲ್ಲಿ ನಿಗದಿಪಡಿಸಿರುವ ಕೊನೆಯ ದಿನಾಂಕದ ಒಳಗೆ ಅರ್ಜಿಯನ್ನು ಭರ್ತಿ ಮಾಡಬೇಕು. ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸುವವರು ಸಹ ಇಲಾಖೆಯ ವೆಬ್‌ಸೈಟ್‌ನಲ್ಲಿ ನಿಗದಿಪಡಿಸಿರುವ ಕೊನೆಯ ದಿನಾಂಕದ ಒಳಗೆ ಅರ್ಜಿ ಭರ್ತಿ ಮಾಡಬೇಕು.

6. ಸರ್ಕಾರಿ ಪ್ರಾಥಮಿಕ / ಪ್ರೌಢ ಶಾಲಾ ಶಿಕ್ಷಕರು ಅಂತರ್ಜಾಲದ ಮೂಲಕ ಸಲ್ಲಿಸಿದ ವರ್ಗಾವಣೆ ಅರ್ಜಿಗಳಲ್ಲಿನ ಸೇವಾ ವಿವರಗಳು ಸರಿಯಿದೆಯೇ ಎಂಬುದನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಭ್ಯರ್ಥಿ ಸಮ್ಮುಖದಲ್ಲಿ ಪ್ರಮಾಣೀಕರಿಸತಕ್ಕದ್ದು. ಪ್ರಮಾಣೀಕರಿಸುವ ಬಗ್ಗೆ ವಿವರವಾದ ಸೂಚನೆಗಳನ್ನು ಪ್ರತ್ಯೇಕವಾಗಿ ನೀಡಲಾಗುವುದು.

7. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007 ದಿನಾಂಕ: 14.11.2007 ರಲ್ಲಿ ಅಧಿಸೂಚಿಸಲಾಗಿರುವ ಅನುಸಾರ ಶಿಕ್ಷಕರು ಸರ್ಕಾರಿ ಸೇವೆಗೆ ನೇಮಕಗೊಂಡ ದಿನಾಂಕದಿಂದ ಇಲ್ಲಿಯವರೆಗೆ ಎಲ್ಲಾ ವೃಂದಗಳಲ್ಲಿ ಎ, ಬಿ, ಸಿ ವಲಯಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಸರಿಯಾಗಿ ದಾಖಲು ಮಾಡಿದ್ದಾರೆಯೆ ಎಂಬ ಬಗ್ಗೆಯೂ ಸಹ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿಶೀಲಿಸಿ ಪ್ರಮಾಣೀಕರಿಸತಕ್ಕದ್ದು. ವೆಬ್‌ಸೈಟ್‌ನಲ್ಲಿ ಪರಿಶೀಲಿಸಿ ಪ್ರಮಾಣೀಕರಿಸುವ ವಿಧಾನವನ್ನು ಸಹ ಪ್ರತ್ಯೇಕವಾಗಿ ತಿಳಿಸಲಾಗುವುದು.

8. ಅರ್ಜಿಗಳನ್ನು ಪ್ರತಿದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿಶೀಲಿಸಬೇಕು. ಅರ್ಜಿಯಲ್ಲಿನ ಮಾಹಿತಿಯ ಮುದ್ರಿತ ಪ್ರತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ರಕ್ಷಾ ಕಡತದಲ್ಲಿಡುವುದು. (ಪರಿಶೀಲನೆ ಅವಶ್ಯವೆಂಬ ಸಂದರ್ಭದಲ್ಲಿ ಹಾಜರುಪಡಿಸುವುದು) ಸರ್ಕಾರದ ಆದೇಶ ಮತ್ತು ನಿಯಮಗಳು ಹಾಗೂ ವೇಳಾಪಟ್ಟಿಯಂತೆ ಸಂಬಂಧಿಸಿದ ಅಧಿಕಾರಿಗಳು ಕರ್ತವ್ಯಗಳನ್ನು ನಿರ್ವಹಿಸಲು ತಿಳಿಸಿದೆ.

9. ಉಪನಿರ್ದೇಶಕರು (ಆಡಳಿತ) ರವರು ಅವರ ಆಡಳಿತ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಾಥಮಿಕ / ಪ್ರೌಢ ಶಾಲೆಗಳು, ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007 ದಿನಾಂಕ: 14.11.2007ರಲ್ಲಿ ಅಧಿಸೂಚಿಸಲಾಗಿರುವ ಅನುಸಾರ ಎ, ಬಿ, ಸಿ, ವಲಯಗಳೆಂದು ವರ್ಗೀಕರಿಸಿ, ದಿನಾಂಕ: 07.04.2010ರಂದು ಅವರವರ ಕಛೇರಿ ಸೂಚನಾ ಫಲಕದಲ್ಲಿ ಪ್ರಕಟಿಸುವುದು. ಅದರ ಸಾಫ್ಟ್ ಪ್ರತಿಯನ್ನು ಇ–ಆಡಳಿತ ಶಾಖೆಯ ಮೇಲ್ ವಿಳಾಸಕ್ಕೆ ವೆಬ್‌ಸೈಟ್‌ನಲ್ಲಿ ಅಳವಡಿಸಲು ಹಾಗೂ ಮುದ್ರಿತ ಪ್ರತಿಯೊಂದನ್ನು ದೃಢೀಕರಿಸಿ ಈ ಕಛೇರಿಗೆ ದಿನಾಂಕ: 07.04.2010 ರೊಳಗೆ ತಲುಪುವಂತೆ ಕಳುಹಿಸುವುದು.

10. ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಜಿಲ್ಲಾ ಹಂತದ ವರ್ಗಾವಣೆಗೆ ಸಂಬಂಧಿಸಿದ ಉಪ ನಿರ್ದೇಶಕರು (ಆಡಳಿತ) ಇವರು ಹಾಗೂ ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆಗೆ ಜಿಲ್ಲಾ ಮಟ್ಟಕ್ಕೆ ಬದಲಾಗಿ ವಿಭಾಗ ಮಟ್ಟದಲ್ಲಿ ಸಂಬಂಧಿಸಿದ ಆಯುಕ್ತಾಲಯದ ಜಂಟಿ ನಿರ್ದೇಶಕರು ವರ್ಗಾವಣಾ ಪ್ರಾಧಿಕಾರಿಗಳಾಗಿರುತ್ತಾರೆ.

11. ವರ್ಗಾವಣೆಯ ಅಧಿನಿಯಮ 2007 ರ ನಿಯಮ 6 (2) ರಲ್ಲಿ ನಮೂದಿಸಿರುವ ಪ್ರಕರಣಗಳನ್ನು ಹೊರತುಪಡಿಸಿ, ದಿನಾಂಕ 04.05.2005ಕ್ಕೆ ಐದು ವರ್ಷಗಳ ಸೇವೆ ಪೂರ್ಣಗೊಳಿಸಿರುವ ಶಿಕ್ಷಕರಿಗೆ ಸೇವಾ ಅವಧಿಯಲ್ಲಿ ಒಂದು ಬಾರಿ ಮಾತ್ರ ಇನ್ನೊಂದು ಜೇಷ್ಠತಾ ಘಟಕಕ್ಕೆ ವರ್ಗಾಯಿಸಬಹುದು.

<u>12. ಹೆಚ್ಚುವರಿ ಶಿಕ್ಷಕರ ಸ್ಥಳಾಂತರ:</u>– ಹೆಚ್ಚುವರಿ ಶಿಕ್ಷಕರನ್ನು ದಿನಾಂಕ:17.4.2010 ರೊಳಗೆ ಮಕ್ಕಳ ಶಿಕ್ಷಕರ ಅನುಪಾತಕ್ಕೆ ಅನುಗುಣವಾಗಿ ಸ್ಥಳಾಂತರಿಸುವುದು. ಈ ರೀತಿ ಸ್ಥಳಾಂತರಿಸಿದ ನಂತರ ಉಂಟಾಗುವ ಹೆಚ್ಚುವರಿ ಖಾಲಿ ಹುದ್ದೆಗಳನ್ನು ಜಿಲ್ಲೆಯೊಳಗೆ ಶಿಕ್ಷಕರ ಅಗತ್ಯ ಇರುವ ಶಾಲೆಗಳಿಗೆ ಸ್ಥಳಾಂತರಿಸುವುದು. ಒಂದು ವೇಳೆ ಹೆಚ್ಚುವರಿ ಖಾಲಿ ಹುದ್ದೆಗಳನ್ನು ಮಕ್ಕಳ ಶಿಕ್ಷಕರ ಅನುಪಾತದಂತೆ ಜಿಲ್ಲೆಯೊಳಗೆ ಸ್ಥಳಾಂತರಿಸಲು ಅವಕಾಶ ಇಲ್ಲದಿದ್ದಲ್ಲಿ ಹೆಚ್ಚುವರಿ ಶಿಕ್ಷಕರ ಖಾಲಿ ಹುದ್ದೆಗಳನ್ನು ಅಗತ್ಯ ಇರುವ ಜಿಲ್ಲೆಗಳಿಗೆ ಸ್ಥಳಾಂತರಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ದಿನಾಂಕ:20.4.2010 ರೊಳಗೆ ಸಲ್ಲಿಸುವುದು. ಹೆಚ್ಚುವರಿ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು ಘಟಕದೊಳಗಿನ ಅಥವಾ ಹೊರಗಿನ ಖಾಲಿ ಹುದ್ದೆಗಳಿಗೆ ಕೋರಿಕೆ ವರ್ಗಾವಣೆ ಅರ್ಜಿ ಸಲ್ಲಿಸಿದಲ್ಲಿ ಪರಿಗಣಿಸಿ, ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಕ್ಕೆ ಅರ್ಜಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಲ್ಲಿಸುವುದು. ಹೆಚ್ಚುವರಿ ಶಿಕ್ಷಕರು ಕೌನ್ಸೆಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ಕೂಡಲೇ ಆ ಹೆಚ್ಚುವರಿ ಹುದ್ದೆಯನ್ನು ಬೇರೊಬ್ಬರಿಂದ ಭರ್ತಿ ಮಾಡಲಾಗದಂತೆ ಗಣಕ ಯಂತ್ರದಲ್ಲಿ ಸ್ಥಗಿತಗೊಳಿಸುವುದು. ಹಾಗೂ ಅಂತಹ ಹುದ್ದೆಗಳ ವಿವರವನ್ನು ಕ್ರೋಢೀಕರಿಸಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಕೌನ್ಸೆಲಿಂಗ್ ಮುಗಿದ 10 ದಿನಗಳೊಳಗೆ ಸಲ್ಲಿಸುವುದು.

13. ಪರಸ್ಪರ ವರ್ಗಾವಣೆಗಳು:–

ಅ) ಶಿಕ್ಷಕರ ಖಾಯಂ ಪೂರ್ವ ಸೇವಾ ಅವಧಿಯು ತೃಪ್ತಿಕರವಾಗಿದೆಯೆಂದು ಘೋಷಿಸಲ್ಪಟ್ಟಿದ್ದರೆ ಅವರ ಪರಸ್ಪರ ವರ್ಗಾವಣೆ ಮನವಿಗಳನ್ನು ಪರಿಗಣಿಸುವುದು. ಪರಸ್ಪರ ವರ್ಗಾವಣೆಗಳನ್ನು ಮಾಡುವಾಗ ವೃಂದ ಮತ್ತು ವಿಷಯಗಳ ಹೊಂದಾಣಿಕೆ ಆಗಿದ್ದಲ್ಲಿ ಮಾತ್ರ ಜಾರಿಗೊಳಿಸತಕ್ಕದ್ದು.

ಆ) ಜಿಲ್ಲಾ, ವಿಭಾಗ ಹಾಗು ರಾಜ್ಯ ಮಟ್ಟದ ಎಲ್ಲಾ ಪರಸ್ಪರ ವರ್ಗಾವಣೆಗಳನ್ನು ಏಕ ಕಾಲದಲ್ಲಿ ಮಾಡುವುದು.

ಇ) ಪರಸ್ಪರ ವರ್ಗಾವಣೆ ಕೋರಿ ಇಂಟರ್ ನೆಟ್ ನಲ್ಲಿ ಮಾಹಿತಿಯನ್ನು ಗಣಕೀಕರಿಸಿರುವ ಶಿಕ್ಷಕರು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಸೇವಾ ವಿವರದ ಪರಿಶೀಲನೆಗೆ ಖುದ್ದಾಗಿ ಹಾಜರಾಗುವುದು. ಆದರೆ ಕ್ರಮ ಸಂಖ್ಯೆ 1 ರ ಶಿಕ್ಷಕರ ವರ್ಗಾವಣೆ ಪ್ರಾಧಿಕಾರದ ಬಳಿ ಇಬ್ಬರೂ ಕೌನ್ಸೆಲಿಂಗ್‌ಗೆ ಹಾಜರಾಗುವುದು.

ಈ) ಸರ್ವ ಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ನೇಮಕವಾಗಿರುವ ಪ್ರಾಥಮಿಕ ಹಾಗೂ ಟಿ.ಜಿ.ಟಿ. ಶಿಕ್ಷಕರನ್ನು ಅದೇ ಯೋಜನೆ ಅಡಿಯಲ್ಲಿ ನೇಮಕಗೊಂಡಿರುವ ಅದೇ ವಿಷಯದ ಶಿಕ್ಷಕ ಹುದ್ದೆಗೆ ಪರಸ್ಪರ ವರ್ಗಾವಣೆ ಮಾಡುವುದು.

ಉ) ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಎಸ್.ಎಸ್.ಎ. ಮತ್ತು ಟಿ.ಜಿ.ಟಿ. ಶಿಕ್ಷಕರ ಮೂಲ ವೇತನಕ್ಕಿಂತ ಕಡಿಮೆ ಅಥವಾ ಸಮಾನವಾದ ಮೂಲ ವೇತನ ಪಡೆಯುತ್ತಿರುವ ರಾಜ್ಯ ವಲಯದ ಶಿಕ್ಷಕರು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿದಲ್ಲಿ ಪರಿಗಣಿಸಬಹುದು.

ಊ) ಎಸ್.ಎಸ್.ಎ. ಮತ್ತು ಟಿ.ಜಿ.ಟಿ. ಶಿಕ್ಷಕರು ಎಸ್.ಎಸ್.ಎ. ಮತ್ತು ಟಿ.ಜಿ.ಟಿ ಖಾಲಿ ಹುದ್ದೆಗೆ ವರ್ಗಾವಣೆಗೆ ಕೋರಿ ಅರ್ಜಿ ಸಲ್ಲಿಸಿದಲ್ಲಿ ಪರಿಗಣಿಸಬಹುದು.

14. ಖಾಯಂ ಪೂರ್ವ ಸೇವಾ ಅವಧಿ ತೃಪ್ತಿಕರ ಎಂದು ಘೋಷಣೆಯಾಗದಿದ್ದಲ್ಲಿ ಅಂತಹ ಶಿಕ್ಷಕರು ವರ್ಗಾವಣೆ ಕೋರಿ ಅರ್ಜಿ ಸಲ್ಲಿಸುವಂತಿಲ್ಲ.

15. ಘಟಕದ ಹೊರಗಿನ ದಂಪತಿ ಪ್ರಕರಣದ ವರ್ಗಾವಣೆಗೆ ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಕನಿಷ್ಠ ಮೂರು ವರ್ಷ ಸೇವೆ ಸಲ್ಲಿಸಿರತಕ್ಕದ್ದು.

16. ತೀವ್ರ ಅನಾರೋಗ್ಯ, ಅಂಗವಿಕಲ ಮತ್ತು ವಿಧವೆ ಪ್ರಕರಣಗಳಿಗೆ ಖಾಯಂ ಪೂರ್ವ ಸೇವಾವಧಿ ತೃಪ್ತಿಕರ ಎಂದು ಘೋಷಣೆಯಾಗಿರಬೇಕು.

17. ಖಾಲಿ ಹುದ್ದೆಗಳನ್ನು ಪ್ರಕಟಿಸುವಾಗ ನೇಮಕಾತಿಗೆ ಅಧಿಸೂಚಿಸಿರುವ ಹುದ್ದೆಗಳನ್ನು ಸೇರಿಸಿ ಪ್ರಕಟಿಸುವುದು. ನೇಮಕಾತಿಗೆ ಅಧಿಸೂಚಿಸಿರುವ ಸಂಖ್ಯೆಯನ್ನು ಉಳಿಸಿಕೊಂಡು ಉಳಿದ ಖಾಲಿ ಹುದ್ದೆಗಳಿಗೆ ವರ್ಗಾವಣೆಗಳನ್ನು ಮಾಡುವುದು.

18. ಶಿಕ್ಷಕರ ಅನುಕೂಲಕ್ಕಾಗಿ ಬೋಧನಾ ವಿಷಯಗಳನ್ನು ಬದಲಾಯಿಸಿ ವರ್ಗಾವಣೆ ಮಾಡಕೂಡದು.

19. ತೀವ್ರ ಅನಾರೋಗ್ಯ ಮತ್ತು ಅಂಗವಿಕಲತೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಿರುವ ಶಿಕ್ಷಕರು ಸಂಬಂಧಿಸಿದ ಜಿಲ್ಲಾ ವೈದ್ಯಕೀಯ ಮಂಡಳಿಯ ಸಮ್ಮುಖದಲ್ಲಿ ನಿಗದಿತ ದಿನಾಂಕದಂದು ವೈದ್ಯಕೀಯ ತಪಾಸಣೆಗೆ ಹಾಜರಾಗುವುದು.

20. 2010ನೇ ಸಾಲಿನ ಸರ್ಕಾರಿ ಪ್ರಾಥಮಿಕ / ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಗಳನ್ನು ಸಕ್ಷಮ ಪ್ರಾಧಿಕಾರಿಗಳು ಉಲ್ಲೇಖ–1, 2, ಮತ್ತು 3 ರ ಸರ್ಕಾರದ ಆದೇಶಗಳನ್ವಯ ಹಾಗೂ ನೀಡಿರುವ ವೇಳಾಪಟ್ಟಿಯ ಪ್ರಕಾರ ಕ್ರಮ ವಹಿಸುವಂತೆ ತಿಳಿಸಿದೆ.

(ಬಿ. ಎ. ಹರೀಶ್ ಗೌಡ)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,

ಗೆ,
1) ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ.
2) ಜಂಟಿ ನಿರ್ದೇಶಕರು,(ಆಡಳಿತ) ಆಯುಕ್ತರ ಕಚೇರಿ, ಬೆಂಗಳೂರು, ಅಪರ ಆಯುಕ್ತರ ಕಚೇರಿ, ಧಾರವಾಡ / ಗುಲ್ಬರ್ಗಾ
3) ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ 04 ವಿಭಾಗೀಯ ಸಹ ನಿರ್ದೇಶಕರವರಿಗೆ ಮುಂದಿನ ಕ್ರಮಕ್ಕಾಗಿ.

ಪ್ರತಿಯನ್ನು:–
1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–1 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
3) ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.
4) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ.
5) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
6) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
7) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳವರಿಗೆ.
8) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು,ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್).
9) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
10) ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ ಮಾಹಿತಿಗಾಗಿ.
11) ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ ಘಟಕ, ಆಯುಕ್ತರ ಕಛೇರಿ, ಸಾ.ಶಿ. ಇಲಾಖೆ, ಬೆಂಗಳೂರು.
12) ಕಛೇರಿ ಪ್ರತಿ